## ಕೊಡಗು ಜಿಲ್ಲೆಯ ರಸ್ತೆಗಳ ದುರಸ್ತಿ

**172 (801):** ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):—

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ರಸ್ತೆಗಳು ತೀರಾ ಹದಗೆಟ್ಟಿದ್ದು ವಾಹನಗಳ ಓಡಾಟಕ್ಕೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ ಶಾಶ್ವತ ವ್ಯವಸ್ಥೆ ಕೈಗೊಳ್ಳುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಒಟ್ಟು 125.72 ಲಕ್ಷ ರೂ.ಗಳ ವೆಚ್ಚದಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ವಾರ್ಷಿಕ ದುರಸ್ತಿ, ವಿಶೇಷ ದುರಸ್ತಿ, ಅಭಿವೃದ್ಧಿ ಕಾರ್ಯಕ್ರಮ ಹಾಗೂ ಮಳೆಹಾನಿ ದುರಸ್ತಿ ಯೋಜನೆಯಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಪ್ರತಿವರ್ಷವೂ ಲಭ್ಯವಾಗುವ ನಿರ್ವಹಣಾ ಅನುದಾನದ ಅಡಿಯಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಅನುವಾಗುವಂತೆ ಕ್ರಮಬದ್ಧವಾದ ಮರು ಡಾಂಬರೀಕರಣ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ:– ಮಾನ್ಯ ಅಧ್ಯಕ್ಷರೇ, 125 ಲಕ್ಷ ರೂಪಾಯಿ ವೆಚ್ಚದಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲು ಪ್ರಯತ್ನ ಪಡುತ್ತಿದ್ದೇವೆಂದಿದ್ದಾರೆ. ಈ ಹಣವನ್ನು ಬಿಡುಗಡೆ ಮಾಡಿದ್ದಾರೆಯೇ ? ಯಾವ ಹೆಡ್ ಆಫ್ ಅಕೌಂಟ್‌ನಲ್ಲಿ ಹಣ ಬಿಡುಗಡೆ ಮಾಡಿಗ್ದಾರೆ ? ಮತ್ತು ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಮಾಡುತ್ತಾರೆ ?

ಶ್ರೀ ಕೆ.ಹೆಚ್. ರಂಗನಾಥ್:– 125 ಲಕ್ಷ ರೂಪಾಯಿ, ಬಿಡುಗಡೆ ಮಾಡಿರುವುದು ಅಲ್ಲ. ಅದು ಇಟ್ಟಿರತಕ್ಕ ಹಣ. ಈಗ ಮಳೆಗಾಲದಲ್ಲಿ ಹಾನಿಯಾಗಿರುವುದಕ್ಕೆ ಜಿಲ್ಲಾ ಪರಿಷತ್ತಿನಿಂದ 14 ಲಕ್ಷ, 30 ಸಾವಿರ ರೂಪಾಯಿ ಬಿಡುಗಡೆ ಮಾಡಿ ಕೆಲಸ ಮಾಡಿಸಲಾಗಿದೆ.

ಶ್ರೀಮತಿ ಸುಮ ವಸಂತ:– ಮಳೆಹಾನಿ ದುರಸ್ತಿ ಯೋಜನೆಯಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಹೇಳಿದ್ದಾರೆ. ನಮ್ಮ ಕೊಡಗು ಜಿಲ್ಲೆಗೆ ಪರಿಹಾರಕ್ಕೆ 50 ಸಾವಿರ ಮಾತ್ರ ಮಳೆ ಹಾನಿಯಲ್ಲಿ ಕೊಟ್ಟಿದ್ದಾರೆ. ಇದು ರಸ್ತೆಗೆ ಕೊಟ್ಟಿದ್ದಲ್ಲ. ಅದು ಮನೆ ಬಿದ್ದು ಹೋಗಿರುವುದಕ್ಕೆ ಸರಿಹಾರ ಕೊಡುವುದಕ್ಕೆ ಆಗುತ್ತದೆ. ಕಳೆದ ಬಡ್ಜೆಟ್ ಸೆಷನ್‌ನಲ್ಲಿ ನಾನು ಪ್ರಶ್ನೆ ಕೇಳಿದ್ದೆ. ಇದೇ ರೀತಿ ಉತ್ತರ ಹೇಳಿದರು. ಅಧಿಕಾರಿಗಳನ್ನು ಕೇಳಿದರೆ ಜಲ್ಲಿ ಇಲ್ಲ ಟಾರ್ ಇಲ್ಲ, ಹಣ ಇಲ್ಲ, ಎಲ್‌ಓಸಿ ಬರಲಿಲ್ಲ, ಗ್ಯಾಂಗ್ ಕೂಲೀಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಕಳೆದ 7 ವರ್ಷಗಳಿಂದ ಪ್ಲಾನ್‌ನಲ್ಲಿ ಯಾವುದೇ ಒಂದು ರಸ್ತೆ ಕಾಮಗಾರಿ ಬಡ್ಜೆಟ್‌ನಲ್ಲಿ ಸೇರಿಲ್ಲ. ನಾನ್ ಪ್ಲಾನ್‌ನಲ್ಲಿ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ನಾನ್ ಪ್ಲಾನ್‌ನಲ್ಲಿ ಯಾವುದೇ ಹಣ ಇಲ್ಲ. ಆದ್ದರಿಂದ ಇದಕ್ಕೆ ಸರ್ಕಾರ ಇನ್ನಾದರೂ ಹೆಚ್ಚಿನ ಆದ್ಯತೆ ಕೊಟ್ಟು ಸ್ಪೆಷಲ್ ಗ್ರಾಂಟ್ ಕೊಟ್ಟು ಕೊಡಗು ಜಿಲ್ಲೆಯಲ್ಲಿ ಕೆಲಸ ಮಾಡಿಸುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಸನ್ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ 310 ಕಿಲೋಮೀಟರ್ ರಾಜ್ಯ ಹೆದ್ದಾರಿ ಇದೆ. 804 ಕಿಲೋಮೀಟರ್ ಮುಖ್ಯ ಜಿಲ್ಲಾ ರಸ್ತೆಗಳು ಇವೆ.

1823 ಕಿಲೋಮೀಟರ್ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರತಕ್ಕಂಥ ರಸ್ತೆಗಳು ಇವೆ. ಹೀಗಾಗಿ ಒದಗಿಸಿರತಕ್ಕಂಥ ಹಣ ಸಾಕಾಗುತ್ತದೆ ಎಂದು ನಾನು ಭಾವಿಸಿಲ್ಲ. ಆದರೆ ಕಾರಣಾಂತರದಿಂದ ಹಣ ಒದಗಿಸುವುದಕ್ಕೆ ಆಗಿಲ್ಲ ಮತ್ತು ರಸ್ತೆಗಳು ತುಂಬಾ ಹಾಳಾಗಿರತಕ್ಕಂಥಾದ್ದು ನಿಜ. ಇದಕ್ಕೋಸ್ಕರವೇ ಪ್ರತ್ಯೇಕವಾಗಿ ಒಂದು ಕಾರ್ಯಕ್ರಮ ಹಾಕಿಕೊಂಡು 125 ಲಕ್ಷ ರೂಪಾಯಿ ವ್ಯವಸ್ಥೆಯನ್ನು ಮಾಡಲಾಗಿದೆ. ಇನ್ನೂ ಹೆಚ್ಚು ಮಾಡಬೇಕಾದ್ದು ಇದೆ. ಸುಮಾರು ವರ್ಷಗಳಿಂದ ಕೆಲಸವಾಗಿಲ್ಲವೆಂದು ಏನು ಮಾನ್ಯ ಸದಸ್ಯರಿಯವರು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಗಮನದಲ್ಲಿ ಇಟ್ಟುಕೊಂಡು, ಮುಂದಿನ ವರ್ಷ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಸುಮಾ ವಸಂತ:– ನಮ್ಮಲ್ಲಿ ಮಳೆ ತುಂಬಾ ಜಾಸ್ತಿ. ಕಳೆದ ವರ್ಷ ಮಳೆಯಲ್ಲಿ ತುಂಬಾ ರಸ್ತೆ ಹಾಳಾಗಿ ಹೋಗಿದೆ. ಈಗಾಗಲೇ ಮೂರು ತಿಂಗಳು ಕಳೆದು ಹೋಗಿದೆ. ಇನ್ನು ಎರಡು ತಿಂಗಳಲ್ಲಿ ಮಾತ್ರ ನಮ್ಮಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ. ಬೇರೆ ಜಿಲ್ಲೆಯ ಹಾಗೆ ನಮ್ಮ ಜಿಲ್ಲೆಯಲ್ಲಿ ಮಳೆ ಪ್ರಾರಂಭವಾದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಈ ಕಾಮಗಾರಿ ಕೆಲಸವನ್ನು ಇನ್ನು ಎರಡು ತಿಂಗಳಲ್ಲಿ ಮುಗಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತೀರ ? ಹೇಗೆ ತಿಳಿಸಿ.

ಶ್ರೀ ಕೆ.ಸಿಬ್. ರಂಗನಾಥ್:– ಮಳೆ ಪ್ರಾರಂಭವಾಗುವುದು ಇನ್ನು ಜೂನ್ 7ನೇ ತಾರೀಖಿನಿಂದ. ನಾವು ಮಾರ್ಚ್ ಏಪ್ರಿಲ್‌ನಲ್ಲಿ ಕೆಲಸ ಪ್ರಾರಂಭಮಾಡುತ್ತೇವೆ.

## ಬೆಳಗಾವಿ ತಾಲ್ಲೂಕಿನ ಮಾಯಚಿ ಗ್ರಾಮದಲ್ಲಿ 110 ಕೆವಿ. ಉಪ ಕೇಂದ್ರ ಸ್ಥಾಪನೆ

**175 (596):** ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್):—

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಳಗಾವಿ ತಾಲ್ಲೂಕು ಮಾಯಚಿ ಗ್ರಾಮದಲ್ಲಿ 110 ಕವಿ ಉಪ ಕೇಂದ್ರ ಸ್ಥಾಪಿಸಬೇಕೆನ್ನುವುದು ಪ್ರಸ್ತಾಪ ಇದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಎಸ್.ಎಂ.ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) ಇದರ ನಿರ್ಮಾಣ ಕೆಲಸವನ್ನು 1994ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ.

SRi B.I. PATIL (UCHAGAON):- It is very necessary to establish a 110 KV Sub–Station at Maeche Village. In last Session, Government has promised that the work of 110 KV Sub–Station at Maeche Village Will be taken up during the Year 1992-93. But the work is not yet started. The farmers are going to harass me. I therefore, request Government through you Speaker Sir, that the work must be taken up on priority basis.

ಶ್ರೀ ಎಸ್.ಎಂ. ಕೃಷ್ಣ:– ಬೆಳಗಾವಿ ತಾಲ್ಲೂಕು ಮಾಯಚಿ ಗ್ರಾಮದಲ್ಲಿ 550 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಒಂದು 110 ಕೆ.ವಿ. ಉಪ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ.